SRI RENUKACHA... COLLEGE OF LAW
LIBRARY
BANGALORE-9

**2043 (New)**

**First Sem. 3 Year LL.B./Fifth Sem. 5 Year B.A. LL.B. (Maj.-Min. System)/ B.B.A. LL.B. (New) Examination, December 2016**

**LAW OF TORTS**

Duration : 3 Hours

Max. Marks : 100

**Instructions :** 1. Answer Q. No. **9** and **any five** of the remaining.

2. Q. No. **9** carries **20** marks and the rest questions carry **16** marks **each**.

3. Answers should be written **either** in **English** or **Kannada** only.

**ಸೂಚನೆಗಳು :** 1. ಪ್ರಶ್ನೆ **9** ಮತ್ತು ಉಳಿದ ಯಾವುದೇ **ಐದು** ಪ್ರಶ್ನೆಗಳಿಗೆ ಉತ್ತರಿಸಿ.

2. ಪ್ರಶ್ನೆ **9**ಕ್ಕೆ **20** ಅಂಕಗಳು ಮತ್ತು ಉಳಿದವುಗಳಿಗೆ **ತಲಾ 16** ಅಂಕಗಳು.

3. ಉತ್ತರಗಳನ್ನು ಪೂರ್ಣವಾಗಿ **ಕನ್ನಡ** ಇಲ್ಲವೇ **ಇಂಗ್ಲೀಷ್**‌ನಲ್ಲಿಯೇ ಬರೆಯಬೇಕು.

Q. No. 1. Define tort and discuss the essential elements of torts. Marks : 16

ಅಪಕೃತ್ಯವನ್ನು ವ್ಯಾಖ್ಯಾನಿಸಿರಿ ಮತ್ತು ಅಪಕೃತ್ಯದ ಅವಶ್ಯಕ ಘಟಕಾಂಶಗಳನ್ನು ಚರ್ಚಿಸಿರಿ.

Q. No. 2. Explain volenti non fit injuria as a defence for tortious liability with exceptions. Marks : 16

"ಸಮ್ಮತಿ ಇತ್ತವನು ಕ್ಷತಿ ಹೊಂದುವುದಿಲ್ಲ" ಎಂಬುದನ್ನು ಅಪಕೃತ್ಯದ ಹೊಣೆಗಾರಿಕೆಗೆ ಪ್ರತಿರಕ್ಷೆಯಾಗಿ ಅದಕ್ಕಿರುವ ಅಪವಾದಗಳೊಂದಿಗೆ ವಿವರಿಸಿರಿ.

Q. No. 3. Define nuisance. Distinguish between private and public nuisance. When can a person bring an action for public nuisance ? Marks : 16

ಉಪದ್ರವವನ್ನು ವ್ಯಾಖ್ಯಾನಿಸಿರಿ. ಖಾಸಗಿ ಹಾಗೂ ಸಾರ್ವಜನಿಕ ಉಪದ್ರವಗಳಿಗಿರುವ ವ್ಯತ್ಯಾಸಗಳನ್ನು ಹೇಳಿರಿ. ಒಬ್ಬ ವ್ಯಕ್ತಿಯು ಸಾರ್ವಜನಿಕ ಉಪದ್ರವದ ಕುರಿತು ಯಾವಾಗ ದಾವೆ ಮಾಡಬಹುದು ?

Q. No. 4. What is trespass to land ? What are the remedies available against it ?

ಭೂ ಅತಿಕ್ರಮಣ ಎಂದರೇನು ? ಭೂ ಅತಿಕ್ರಮಣದ ವಿರುದ್ಧ ದೊರ ಪರಿಹಾರಗಳು ಯಾವುವು ?

Q. No. 5. What are the essentials of tort of conversion ? What are the defences available in an action for conversion ?

ಪರಿವರ್ತನೆ (ರೂಪಾಂತರ) ಅಪಕೃತ್ಯದ ಅವಶ್ಯಕ ಘಟಕಾಂಶಗಳು ಯಾವುವು ಪರಿವರ್ತನೆ ಅಪಕೃತ್ಯದ ದಾವೆಯಲ್ಲಿ ದೊರೆಯುವ ಪ್ರತಿರಕ್ಷೆಗಳು ಯಾವುವು ?

Q. No. 6. Explain the defences available is an action for defamation.

ಮಾನಹಾನಿ ದಾವೆಯಲ್ಲಿ ದೊರೆಯಬಹುದಾದ ಪ್ರತಿರಕ್ಷೆಗಳನ್ನು ವಿವರಿಸಿರಿ.

Q. No. 7. Explain the salient features of the Consumer Protection Act, 19

ಗ್ರಾಹಕ ರಕ್ಷಣಾ ಅಧಿನಿಯಮ, 1986ರ ಪ್ರಮುಖ ಲಕ್ಷಣಗಳನ್ನು ವಿವರಿಸಿರಿ.

Q. No. 8. Write short notes on **any two** of the following :

ಯಾವುದೇ **ಎರಡರ** ಕುರಿತು ಟಿಪ್ಪಣಿ ಬರೆಯಿರಿ :

(a) Deceit or Fraud.

ಮೋಸ/ವಂಚನೆ.

(b) Tort and crime.

ಅಪಕೃತ್ಯ ಮತ್ತು ಅಪರಾಧ.

(c) Application for compensation under Motor Vechicles Act.

ಮೋಟಾರು ವಾಹನ ಅಧಿನಿಯಮದಡಿ ಪರಿಹಾರಕ್ಕಾಗಿ ಅರ್ಜಿ.

Q. No. 9. Answer **any two** of the following :

ಕೆಳಗಿನವುಗಳಲ್ಲಿ ಯಾವುದೇ **ಎರಡನ್ನು** ಉತ್ತರಿಸಿರಿ :

(a) A threw a lighted squib into a crowded market place which fell on the shed of B. B threw it away in the same manner which fell on the shed of C. C also threw it away, which burst in the face of P and injured his. Who is liable for the injury ? Dicide.

'ಅ'ನು ಬೆಂಕಿ-ಹತ್ತಿದ ಪಟಾಕಿಯನ್ನು ಕಿಕ್ಕಿರಿದ ಪೇಟೆಯಲ್ಲಿ ಬಿಸಾಡಿದನು. ಅದು 'ಬ'ನ ಚಪ್ಪರದ ಮೇಲೆ ಬಿದ್ದಿತು. 'ಬ'ನು ಆ ಪಟಾಕಿಯನ್ನು ಬಿಸ ಬಿಸಾಡಿದಾಗ ಅದು 'ಕ'ನ ಚಪ್ಪರದ ಮೇಲೆ ಬಿದ್ದಿತು. 'ಕ'ನೂ ಸಹಿತ ಹಾಗೆ ಬಿಸಾಡಿದಾಗ ಅದು 'ಪ'ನ ಮುಖಕ್ಕೆ ಬಡಿದು, ಸಿಡಿಯಿತು ಮತ್ತು ಆತನನ್ನು ಗಾಯಗೊಳಿಸಿತು. ಈ ಗಾಯಕ್ಕೆ ಯಾರು ಹೊಣೆಯಾಗುವರು ? ನಿರ್ಧರಿಸಿ.

Mr. Gupta has the business of selling sarees in the name of "Resham Sarees" for the past 20 years. Resham Sarees are famous in the market. Mr. Sharma has recently started selling sarees by the same name. Has Mr. Sharma committed any tort ? Decide.

ಮಿ. ಗುಪ್ತಾ ಕಳೆದ 20 ವರ್ಷಗಳಿಂದ 'ರೇಷಮ್ ಸಾರೀಸ್' ಎಂಬ ಹೆಸರಿನಲ್ಲಿ ಸೀರೆಗಳ ಮಾರಾಟದ ವ್ಯಾಪಾರವನ್ನು ಹೊಂದಿದ್ದಾನೆ. ರೇಷಮ್ ಸಾರೀಸ್ ಮಾರುಕಟ್ಟೆಯಲ್ಲಿ ಪ್ರಸಿದ್ಧವಾಗಿವೆ. ಇತ್ತೀಚೆಗೆ ಮಿ. ಶರ್ಮಾ ಇದೇ ಹೆಸರಿನ ಸೀರೆಗಳನ್ನು ಮಾರಲು ಪ್ರಾರಂಭಿಸಿದ್ದಾನೆ. ಮಿ. ಶರ್ಮಾ ಯಾವುದೇ ಅಪಕೃತ್ಯವನ್ನು ಎಸಗಿದ್ದಾನೆಯೇ ? ನಿರ್ಧರಿಸಿರಿ.

A metalic wire was found in the food served by 'Pushpak' airlines. While eating the food a passenger's gum was injured. He intends to claim compensation. Advice him.

'ಪುಷ್ಪಕ್' ಏರ್‌ಲೈನ್ಸ್‌ನವರು ಒದಗಿಸಿದ ಆಹಾರ ಪದಾರ್ಥದಲ್ಲಿ ಒಂದು ಲೋಹದ ತಂತಿಯು ಸಿಕ್ಕಿತು. ಒಬ್ಬ ಪ್ರಯಾಣಿಕನು ಆ ಆಹಾರವನ್ನು ತಿನ್ನುವಾಗ ಅವನ ಒಸಡಿಗೆ ನೋವಾಯಿತು. ಆತನು ಪರಿಹಾರವನ್ನು ಕೋರಬಯಸುತ್ತಾನೆ. ಅವನಿಗೆ ಸಲಹೆಯನ್ನು ನೀಡಿರಿ.

---

COLLEGE OF LAW LIBRARY BANGALORE-9